ವೆಚ್ಚವೆಷ್ಟು?

ಆ) ಈ ರೀತಿ ನಿಗದಿ ಪಡಿಸಿದ ವೆಚ್ಚದಲ್ಲಿ 1-1-93ನೇ ತಾರೀಖಿನವರೆಗೆ ಖರ್ಚು ಮಾಡಿರುವ ಹಣವೆಷ್ಟು?

ಇ) ಒಟ್ಟು ವೆಚ್ಚದ ಶೇಕಡಾ ಎಷ್ಟು ಭಾಗ ಖರ್ಚು ಮಾಡಲಾಗಿದೆ?

ಶ್ರೀ ಟಿ.ಎಂ.ಮಂಜುನಾಥ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ರಾಜ್ಯ ಸಚಿವರು):-

ಅ) ಕರ್ನಾಟಕ ಸರ್ಕಾರವು 1992-93ನೇ ವರ್ಷದಲ್ಲಿ ರಾಜ್ಯ ಯೋಜನೆಯಡಿಯಲ್ಲಿ ಖರ್ಚು ಮಾಡಲು ಅಯವ್ಯಯದಲ್ಲಿ ನಿಗಧಿಪಡಿಸಿರುವ ಹಣದ ಮೊತ್ತ 2158.84 ಕೋಟಿ ರೂಪಾಯಿಗಳು.

ಆ) 1992-93ನೇ ಸಾಲಿನಲ್ಲಿ ರಾಜ್ಯ ಯೋಜನೆಯಡಿಯಲ್ಲಿ 31-12-92ರ ಅಂತ್ಯದವರೆಗೆ ಆದ ವೆಚ್ಚ ಸುಮಾರು 1074.75 ಕೋಟಿ ರೂಪಾಯಿಗಳು.

ಇ) 1992-93ನೇ ಅಯವ್ಯಯದಲ್ಲಿ ರಾಜ್ಯ ಯೋಜನೆಯಡಿಯಲ್ಲಿ ಒಟ್ಟು ಒದಗಿಸಿದ ಹಣದಲ್ಲಿ ಶೇ.50ರಷ್ಟು ಹಣವನ್ನು 31-12-92ರ ಅಂತ್ಯದವರೆಗೆ ಖರ್ಚು ಮಾಡಲಾಗಿದೆ.

ಸರ್ಕಾರಿ ನೌಕರರಿಗೆ ಕೊಡುವ ತುಟ್ಪಿ ಭತ್ಯೆಯ ಹಣವನ್ನು ಸಣ್ಣ ಉಳಿತಾಯ ಸರ್ಟಿಫಿಕೇಟ್‌ಗಳಿಗೆ ಬದಲಾಗಿ ನಗದು ಕೊಡಲು ಒತ್ತಾಯ.

934(699) ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1991-92ರ ಡಿಸೆಂಬರ್‌ವರೆಗೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ರಾಜ್ಯ ಸರ್ಕಾರ ನೌಕರರಿಗೆ ಎಷ್ಟು ಸಲ ತುಟ್ಪಿಭತ್ಯೆ ಕೊಡಲಾಗಿದೆ?

ಆ) ಮೂಲವೇತನ ರೂ.3500-00ಕ್ಕಿಂತ ಮೇಲ್ಪಟ್ಟ ವರ್ಗದವರಿಗೆ ಹೆಚ್ಚಿಸಲಾದ ತುಟ್ಪಿಭತ್ಯೆಯನ್ನು ನಗದು ರೂಪದಲ್ಲಿ ಕೊಡಲ್ಪಾಗಿದೆಯೇ?

ಇ) ಹಾಗಿಲ್ಲದಿದ್ದಲ್ಲಿ, ಈ ವರ್ಗದ ನೌಕರರಿಗೂ ಬೆಲೆ ಏರಿಕೆ ಅನ್ವಯಿಸುವುದಿಲ್ಲವೆಂದು ಸರ್ಕಾರದ ಭಾವನೆಯೇ, ಈ ವರ್ಗದ ಜನರಿಗೆ ತಾರತಮ್ಯ ಮಾಡಿದಂತೆ ಆಗುವುದಿಲ್ಲವೇ?

ಈ) ಸರ್ಕಾರ ಈ ವರ್ಗದ ಜನರಿಗೂ ನಗದು ರೂಪದಲ್ಲಿ ತುಟ್ಪಿಭತ್ಯೆಯನ್ನು ಕೊಡುವ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

ಅ) 1991-92ರ ಡಿಸೆಂಬರ್‌ವರೆಗೆ ನಾಲ್ಕು ಕಂತು ತುಟ್ಪಿಭತ್ಯೆಯನ್ನು ನೀಡಲಾಗಿದೆ.

ಆ) ಇಲ್ಲ.

ಇ) ಇಲ್ಲ.

ಈ) ಪ್ರತಿ ಸಲವೂ ಪರಿಶೀಲಿಸಲಾಗುವುದು.

ತುಂಗ ಭದ್ರಾ ಕಾರ್ಖಾನೆಯವರು ಸರ್ಕಾರಕ್ಕೆ ಕಟ್ಟಬೇಕಾದ ತೆರಿಗೆ ಬಾಕಿ ಮನ್ನ.

935(107) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1988 ರಿಂದ ಶಿವಮೊಗ್ಗದ ತುಂಗಭದ್ರ ಸಕ್ಕರೆ ಕಾರ್ಖಾನೆಯವರಿಂದ ಈ ವರೆಗೆ ಬರಬೇಕಾದ ಖರೀದಿ ತೆರಿಗೆ ಬಾಕಿ ಮೊತ್ತವೆಷ್ಟು?

ಆ) ಈ ಖರೀದಿ ತೆರಿಗೆ ಬಾಕಿ ಬಗ್ಗೆ ಹಣ ಪಾವತಿ ಮಾಡದ ಕಾರಣ ಬಡ್ಡಿ ಹಾಕಿದ್ದು ನಿಜವೆ ಹಾಗೂ ಆ ಮೊತ್ತವೆಷ್ಟು?

ಇ) ದಿನಾಂಕ 21-8-1991ರಂದು ಸರ್ಕಾರ ಒಂದು ಆಜ್ಞೆ ಹೊರಡಿಸಿ ಬಡ್ಡಿ ಮನ್ನಾ ಮಾಡಿ ಖರೀದಿ ತೆರಿಗೆ ಹಣ ಪಾವತಿ ಮಾಡಲು ಸುಲಭ ಕಂತುಗಳನ್ನು ಕೊಟ್ಟಿರುವುದು ನಿಜವೆ;

ಈ) ರಾಜ್ಯದಲ್ಲಿ ಬೇರೆ ಯಾವುದಾದರೂ ಸಕ್ಕರೆ ಕಾರ್ಖಾನೆಗಳಿಗೆ ಇದೇ ರೀತಿಯ ಪರಿಹಾರ ಒದಗಿರುವುದೇ? (ವಿವರ ಒದಗಿಸುವುದು);

ಶ್ರೀ ಎಂ. ವೀರಪ್ಪಮೊಯಿಲಿ(ಮುಖ್ಯಮಂತ್ರಿಗಳು):-

ಅ) ವಿವರ ಈ ಕೆಳಕಂಡಂತಿದೆ:

ವರ್ಷ	ಮೊತ್ತ
1988-89	ಇಲ್ಲ
1989-90	ಇಲ್ಲ
1990-91	ರೂ. 29,35,512.00
1991-92	ರೂ. 40,47,112.00

ಆ) ಹೌದು. 1990-91ರ ಸಾಲಿಗೆ ಕರ್ನಾಟಕ ಮಾರಾಟ ತೆರಿಗೆ ನಿಯಮ 13(2)ರ ಪ್ರಕಾರ ರೂ.1,61,022.00 ದಂಡ ವಿಧಿಸಲಾಗಿದೆ. ಈ ಪೈಕಿ ರೂ.7,820.00 ಜಮಾ ಆಗಿದ್ದು ಬಾಕಿ ಮೊತ್ತವಾದ ರೂ.1,53,202.00 ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿಯ ರಿಟ್ ಅರ್ಜಿ ಸಂಖ್ಯೆ 4578:93ರಲ್ಲಿ ತಡೆಯಾಜ್ಞೆಗೆ ಒಳಪಟ್ಟಿರುತ್ತದೆ.

ಇ) ಹೌದು

ಈ) ಇಲ್ಲ

ವೀರಾಜಪೇಟೆ ತಾಲೂಕು, ಹೆರ್ಮಾಡು ಗ್ರಾಮಸ್ಥರಿಗೆ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ